ಸಾಕ್ಷಿಗೆ ದಿನಾಂಕ ***28-06-2022*** ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಎಂ.ಸಿ. ವಕೀಲರಿಂದ.

ಇಲಕಲ್ಲಿನಲ್ಲಿ ಬಾಗವಾನ ಗಲ್ಲಿ ಎಂದು ಒಂದು ದೊಡ್ಡ ಓಣಿ ಇದೆ ಎಂದರೆ ಸರಿ. ಅಲ್ಲಿ ಬಾಗವಾನ ಎಂಬ ಅಡ್ಡ ಹೆಸರಿನ 3-4 ಮನೆಗಳು ಇದೆ ಎಂದರೆ ಸರಿ. ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಿಪಿ 6 ರಲ್ಲಿ ಮೊಹಮ್ಮದ ತಾಜುದ್ದೀನ ಎ. ಬಾಗವಾನ ಎಂದು ಇದೆ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ ಆರೋಪಿಯ ಹೆಸರು ಮೊಹಮ್ಮದ ತಾಜುದ್ದೀನ ಬಾಗವಾನ ಎಂದು ಬರಿಸಿರುತ್ತೇನೆ. ನೋಟಿಸು ಸಹ ಅದೇ ಹೆಸರಿನಲ್ಲಿ ಕೊಟ್ಟಿರುತ್ತೇನೆ. ಆರೋಪಿಯ ಹೆಸರು ಮೊಹಮ್ಮದ ತಾಜುದ್ದೀನ ಅಮೀನಸಾಬ ಬಾಗವಾನ ಎಂದರೆ ನಾನು ಆರೋಪಿಯೊಂದಿಗೆ ವ್ಯವಹಾರ ಮಾಡಿದಾಗ ಆತನ ಪೂರ್ಣ ಹೆಸರು ನನಗೆ ಗೊತ್ತಿರಲಿಲ್ಲ. ನಾನು ಕೊಟ್ಟ ನೋಟಿಸು ಆರೋಪಿಗೆ ಜಾರಿ ಆಗಿಲ್ಲ ಎಂರ ಸರಿಯಲ್ಲ. ನಿಪಿ 5 ರಲ್ಲಿರುವ ಸಹಿ ಮತ್ತು ಆರೋಪಿಯ ಸಹಿ ಬೇರೇ ಬೇರೇ ಎಂದರೆ ಸರಿಯಲ್ಲ. ನಾನು ಪಿರ್ಯಾದಿ ಮತ್ತು ನೋಟಿಸು ತಪ್ಪು ವ್ಯಕ್ತಿಯ ಮೇಲೆ ಕೊಟ್ಟಿದ್ದು ಅದು ಕಾನೂನು ಪ್ರಕಾರ ನಡೆಯುವುದಿಲ್ಲ ಎಂರೆ ಸರಿಯಲ್ಲ. ನಾನು ಖಾಲಿ ಚೆಕ್ಕಿನ ಮೇಲೆ ಆರೋಪಿಯ ಸಹಿ ಪಡೆದಿದ್ದೆ ಎಂದರೆ ಸರಿಯಲ್ಲ. ನಿಪಿ 6 ನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಖಾಲಿ ಬಿಲ್ಲಿಗೆ ಮತ್ತು ಚೆಕ್ಕಿಗೆ ಆರೋಪಿಯ ಸಹಿ ಪಡೆದಿದ್ದೆ ಎಂದರೆ ಸರಿಯಲ್ಲ. ಆರೋಪಿಯು ನನ್ನಕಡೆಯಿಂದ ಕೇವಲ ರೂ. 80,000/- ಮಾಲನ್ನು ಖರೀದಿ ಮಾಡಿದ್ದ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.